Indian Journal of History and Archaeology

ISSN (E):2582-225X
VOL-1 ,ISSUE -5, JAN-FEB, 2020, 01-05

# ಶಾಸನಗಳ ಹಿನ್ನಲೆಯಲ್ಲಿ ಹೆಗ್ಗಡದೇವನಕೋಟೆ ತಾಲೂಕಿನ ಸಾಮಾಜಿಕ ವ್ಯವಸ್ಥೆ

**ಡಾ.ಎಸ್.ಕೆ.ದೇವೇಗೌಡ**

ಡಾ.ಎಸ್.ಕೆ.ದೇವೇಗೌಡ
ಸಹಾಯಕಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ಕಲಾ ಕಾಲೇಜು , ಮೈಸೂರು

ಸಮಾಜ ನಿತ್ಯ ಪರಿವರ್ತನಶೀಲವಾಗಿದ್ದು ಅದರ ಬೆಳವಣಿಗೆಯಲ್ಲಿ ಅನೇಕ. ಜನರನ್ನು ಜೀವನೋಪಾಯಕ್ಕಾಗಿ ಅನುಸರಿಸುವ ಆಧಾರಗಳ ಮೇಲೆ ಈ ಘಟ್ಟಗಳನ್ನು ನಿರ್ಧರಿಸಬಹುದು.[1] ಪ್ರಾಚೀನ ಶಿಲಾಯುಗದಲ್ಲಿ ಮಾನವನ ಆಹಾರ ಅನ್ವೇಷಣೆ ಮತ್ತು ಸಂಗ್ರಹಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಅಲೆಯುತ್ತ ಕಲ್ಲಿನ ಆಯುಧಗಳಿಂದ ಪ್ರಾಣಿಗಳನ್ನು ಕೊಂದು ಹಸಿಯ ಮಾಂಸ ಭಕ್ಷಿಸುತ್ತಿದ್ದ, ಅಲ್ಲಲ್ಲಿ ದೊರೆತ ಹಣ್ಣು ಹಂಪಲಗಳು, ಗೆಡ್ಡೆ ಗೆಣಸುಗಳನ್ನು ತಿಂದು ಗವಿಗಳಲ್ಲಿ, ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದ ಈ ರೀತಿಯಾಗಿ ಎಷ್ಟೋ ಶತಮಾನಗಳ ನಂತರ ಬೇಸಾಯ ಮಾಡುವುದನ್ನು ಕಲಿತ. ಇದಕ್ಕಾಗಿ ನೀರಿನ ಸೌಕರ್ಯವಿರುವ ಫಲವತ್ತಾದ ಭೂಮಿ ಇರುವ ನದಿ ತೀರ ಪ್ರದೇಶಗಳಲ್ಲಿ ನೆಲೆಸಿದ ಹಾಗೂ ಒಂದೆಡೆ ನೆಲೆಸಿದ್ದರಿಂದ ಸ್ಥಿರ ಜೀವನ ಅಗತ್ಯವಾಯಿತು. ಮಾನವ ಸಂಘಜೀವಿಯಾಗಿ ಕೃಷಿಯನ್ನೇ ಮುಖ್ಯ ಕಸುಬನ್ನಾಗಿ ಮಾಡಿಕೊಂಡು ಕೆಲವು ಕುಟುಂಬಗಳು ಒಂದೇ ಪ್ರದೇಶವನ್ನು ಆಕ್ರಮಿಸಿಕೊಂಡು ಸ್ಥಿರ ಜೀವನವನ್ನು ನಡೆಸಲಾರಾನ್ನೆಸಿದಾಗ ಸೃಷ್ಠಿಯಾಯಿತ್ತೆನ್ನಬಹುದು.[2]

ಈ ಸಮಾಜದ ಉನ್ನತಿ, ಶಾಂತಿ, ಸುಭಿಕ್ಷೆ, ಸಮಾಧಾನ ಮತ್ತು ಸ್ಥಿರ ಬದುಕಿಗಾಗಿ ರಾಜಕೀಯ ಆರ್ಥಿಕ ಮತ್ತು ಧಾರ್ಮಿಕ ಅಂಶಗಳು ಸಾಮಾನ್ಯ ಪರಿಕಲ್ಪನೆಯಾಗಿ ಅಸ್ತಿತ್ವದಲ್ಲಿದ್ದು ಸಾಮಾ, ದಂಡ, ಭೇದ ಮತ್ತು ಧರ್ಮ ಶಕ್ತಿ ಸಮಾಜದ ನಿಯಂತ್ರಣದ ಸಾಧನೆಗಳು ಯಾವುದೇ ಸಮಾಜದಲ್ಲಿ ಎರಡು ನಿಯಂತ್ರಣಗಳು ಇರುತ್ತವೆ. ಅವುಗಳಲ್ಲಿ ಅನೌಪಚಾರಿಕ ಮತ್ತು ಔಪಚಾರಿಕ ನಿಯಂತ್ರಣ ಎಂಬುದಾಗಿದ್ದು ಕುಟುಂಬದ ಆಂತರಿಕ ಔಪಚಾರಿಕ

ನಿಯಂತ್ರಣವಾದರೆ, ದಂಡ ಶಕ್ತಿಯ ಮೂಲಕ ಆಂತರಿಕ ಆಳುವ ವರ್ಗ ಮತ್ತು ಧರ್ಮ ಶಕ್ತಿಯ ಮೂಲಕ ಪುರೋಹಿತ ವರ್ಗ ಮತ್ತು ಮುಖಂಡರು ಹೊಂದಿರುವ ಸಾಮಾಜಿಕ ನಿಯಂತ್ರಣವೇ ಔಪಚಾರಿಕ ನಿಯಂತ್ರಣ. ಅನೌಪಚಾರಿಕ ನಿಯಂತ್ರಣದಲ್ಲಿ ಅಗ್ರಹಾರಗಳ ಸ್ಥಾಪನೆ ಮತ್ತು ಪೋಷಣೆ ಮತ್ತು ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ ಬಸದಿಗಳ ರಚನೆ ದಾನ ಶಾಸನಗಳ ಮೂಲಕ ವರ್ಣ್ಯಾರ್ಜನೆಯ ಆಕಾಂಕ್ಷೆ ದಾನ ಶಾಸನಗಳ ಪಾಪದ ಭೀತಿ, ವಿವಿಧ ಧರ್ಮಗಳ, ವಿವಿಧ ಮತ ಧರ್ಮಗಳ, ಪಂಥಗಳ, ಗುರುವರ್ಗಗಳ ಸಂಪರ್ಕ ಬುದ್ಧಿವಂತ ವರ್ಗ ಪೋಷಣೆ ಮೊದಲಾದವುಗಳು ಇಲ್ಲಿ ಕಂಡು ಬರುತ್ತವೆ.[3]

ಔಪಚಾರಿಕ ನಿಯಂತ್ರಣದಲ್ಲಿ ರಾಜ್ಯ ವ್ಯವಸ್ಥೆ ಸರ್ಕಾರದ ಮೂಲಕ ದಂಡ ಶಕ್ತಿಯನ್ನು ಅನುಷ್ಠಾನಗೊಳಿಸುವುದು ವರ್ಣ ವ್ಯವಸ್ಥೆಯ ಅಂಗವಾಗಿದೆ. ಸಾಮಾಜಿಕ ಸಂಸ್ಥೆಗಳು ಮತ್ತು ಕಟ್ಟಡಗಳ ಮನ್ನಣೆ ನೀಡುವುದು ಸ್ಮೃತಿ, ಆಗಮ ಶಾಸ್ತ್ರ, ನೀತಿಶಾಸ್ತ್ರ, ವೇದಾಂತ ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದ ನಿಯಮಗಳನ್ನು ಪಾಲಿಸುವಂತೆ ಸಾಮಾಜಿಕ ಮೌಲ್ಯಗಳ ಮೂಲಕ ಪ್ರಚಾರ ಕಲೆಯ ಮೂಲಕ ಸಾಮಾಜಿಕ ನೀತಿ ನಿಯಮಗಳನ್ನು ಪ್ರಚಾರಗಳನ್ನು ಮಾಡುವುದು ಕಂಡು ಬರುತ್ತದೆ. ಧರ್ಮ ಸಂಸ್ಕೃತಿ ಆತ್ಮವಾದರೆ, ಸಮೃದ್ಧ ಸಮಾಜದ ಸಂಸ್ಕೃತಿ ದೇಶವಾಗಿದೆ. ಈ ವ್ಯವಸ್ಥೆಯ ವಿರುದ್ಧ ನಿಯಂತ್ರಣ ಸಾಧಿಸಲು ಸಮಾಜದಲ್ಲಿ ಶಾಂತಿ ಸಮಾಧಾನ ತರುವುದಕ್ಕಾಗಿ ಸಾಮಾಜಿಕ ಭದ್ರತೆಗಾಗಿ ನಿಯಂತ್ರಣ ಅವಶ್ಯಕ .

ಸಮುದಾಯದಲ್ಲಿ ಶಾಂತಿ ಮತ್ತು ಭದ್ರತೆಯಿಂದ ಮಾತ್ರ ಪ್ರಗತಿ ಸಾಧ್ಯ. ಸಾಮಾಜಿಕ ಪ್ರಗತಿಯಲ್ಲಿ ಎರಡು ವಿಧ. ಅವು ಸಾಂಸ್ಕೃತಿಕ ಪ್ರಗತಿ ಮತ್ತು ಭೌತಿಕ ಪ್ರಗತಿ ಸಾಂಸ್ಕೃತಿಕ ಪ್ರಗತಿ ಎಂದರೆ ಸಾಮಾಜಿಕ ಸಂಬಂಧಿಗಳಾದ ಪ್ರೀತಿ–ಪ್ರೇಮ, ವಿಶ್ವಾಸ, ಕರುಣೆ, ತ್ಯಾಗ, ಸಹಬಾಳ್ವೆ, ದೇಶಭಕ್ತಿ, ಸಹನೆ ಇತ್ಯಾದಿಗಳನ್ನು ಉಳಿಸಿ ಬೆಳೆಸುವುದು. ಭೌತಿಕ ಪ್ರಗತಿ ಎಂದರೆ ಆರ್ಥಿಕ ಪ್ರಗತಿ ಸಾಧಿಸುವುದು. ಇಂತಹವು ಸಮಾಜದಲ್ಲಿ ಆಗಬೇಕಾದರೆ ಸಾಮಾಜಿಕ ವ್ಯವಸ್ಥೆ ಮತ್ತು ಸಂಘಟನೆ. ಸಾಮಾಜಿಕ ಸಂಘಟನೆ ಒಂದು ಸಾಂಸ್ಕೃತಿಕ ವಲಯದ ಬಹುಮುಖ್ಯ ಅಂಗ. ಈ ಸಾಮಾಜಿಕ ಸಂಘಟನೆಗಳಲ್ಲಿ ಗುಂಪು ವರ್ಗ ಕಟ್ಟಳೆ ಸಂಪ್ರದಾಯ ಮೌಲ್ಯ ಮುಂತಾದ ಅಂಶಗಳು ಗಮನಾರ್ಹ. ಎಲ್ಲ ವರ್ಗ ಮತ್ತು ಜಾತಿ ಗುಂಪುಗಳು ಸಾಮಾಜೀಕರಣದ ಪ್ರಕ್ರಿಯೆಗೆ ಒಳಗಾಗಲೇ ಬೇಕು. ಒಳಗಾಗುತ್ತವೆ. ಇದರಿಂದ ಸಮಾಜದಲ್ಲಿ ಶಾಂತಿ ಸಮಾಧಾನ ಮತ್ತು ಸಮತೋಲನ ಏರ್ಪಡುವುದು ಸಾಮಾಜಿಕ ಸಾಂಸ್ಕೃತಿಕ ಪರಂಪರೆ ಸ್ವಾಭಾವಿಕ ನಿಯಂತ್ರಣ ಮತ್ತು ನಂಬಿಕೆಯನ್ನು ಪೋಷಿಸುತ್ತದೆ. ಅಂದರೆ ಸಾಂಸ್ಕೃತಿಕ ಸಾಮಾಜಿಕ ನಿಯಂತ್ರಣಕ್ಕೆ ಸ್ವಾಭಾವಿಕ ತಂಡವಾಗಿಯೂ ನಂಬಿಕೆಗಳನ್ನು ಉಳಿಸಿ, ಬೆಳೆಸಿ ಪೋಷಿಸುವ ಸಾಧನವಾಗಿಯೂ ಇರುತ್ತವೆ.[4]

ಸಮಾಜ ಆದಿಮಾನವನ ಸಂಸ್ಕೃತಿಯ ಹಂತದಿಂದ ಜಾನಪದ ಸಂಸ್ಕೃತಿಯ ಹಂತಕ್ಕೆ ವಿಕಾಸಗೊಂಡಿತು. ಈ ಹಂತದಲ್ಲಿ ನಿಯಂತ್ರಣ ಅಷ್ಟೊಂದು ಕ್ಲಿಷ್ಟವಾಗಿರಲಿಲ್ಲ. ಏಕೆಂದರೆ ಜೀವನ ಶೈಲಿ ಅತ್ಯಂತ ಸರಳವಾಗಿದ್ದು ಒಂದು ನಿರ್ದಿಷ್ಟವಾದ ಭೌಗೋಳಿಕ ಮಿತಿಯೊಳಗೆ ಇದ್ದಿತು. ಆದರೆ ಶಿಷ್ಟ ಸಂಸ್ಕೃತಿಯೂ ಆಗಮ ಮತ್ತು ಬೆಳವಣಿಗೆಯಿಂದ ಇಲ್ಲಿನ ಸಮಾಜದಲ್ಲಿ ಕೆಲವು ವಿಶಿಷ್ಟ ಅಂಶಗಳು ತಲೆ ಎತ್ತಿದ್ದವು. ಉದಾಹರಣೆ ವರ್ಣ ವ್ಯವಸ್ಥೆ ಮತ್ತು ಆಶ್ರಮ ಧರ್ಮ ವ್ಯವಸ್ಥೆ ಈ ವ್ಯವಸ್ಥೆ ಸಮಾಜದ ರಚನೆಯ ಬುನಾದಿಯಾಯಿತು. ಕಾಲಕ್ರಮೇಣ ವ್ಯವಸ್ಥೆ ಜಾತಿ ವ್ಯವಸ್ಥೆಯಾಗಿ ರೂಪಾಂತರಗೊಂಡಿತು ಜೊತೆಗೆ ವೈದಿಕ ಪಂಥಗಳಾದ ಶೈವ, ವೈಷ್ಣವ, ಶಾಕ್ತ ಮತ್ತು ಜೈನರ ಜೈನರ ಸಾಮಾಜಿಕ ಗುಂಪುಗಳು ಕನ್ನಡ, ತೆಲುಗು, ತಮಿಳು ಮೊದಲಾದ ಭಾಷಾವಾರು ಗುಂಪುಗಳಲ್ಲಿ ತಲೆಯೆತ್ತಿದ್ದವು. ದೂರ ದೂರದ ರಾಜಕೀಯ ಕೇಂದ್ರದೊಡನೆ ಸ್ಥಳೀಯ ಸಾಮಾಜಿಕ ವ್ಯವಸ್ಥೆ ಸಂಪರ್ಕವನ್ನುಟ್ಟು ಕೊಳ್ಳುವಂತಾಯಿತು. ಗಂಗರ ಕಾಲದಿಂದ 19 ನೇ ಶತಮಾನದ ಆರಂಭದವರೆಗೆ ಇಂತಹ ಬೆಳವಣಿಗೆಯನ್ನು ಕಾಣಬಹುದು.

ಮಾನವೀಯ ಮೌಲ್ಯಗಳನ್ನು ಅನುಷ್ಠಾನಗೊಳಿಸಿ ಮಾನವ ಮಾನವನನ್ನು ಹತ್ತಿರ ತಂದು ಜನತೆಯನ್ನು ಜೊತೆಗೊಡಿಸುವ ಪ್ರಮುಖ ತಾಣವೇ ಸಮಾಜವೆನಿಸಿದೆ. ತನ್ನೊಳಗಿನ ಸದಸ್ಯರ ಬೇಕು ಬೇಡ ಮುಂತಾದ ಅಗತ್ಯಗಳನ್ನು ಕುಟುಂಬ ನೋಡಿಕೊಳ್ಳುವಂತೆ ಇಂತಹ ಹಲವು ಕುಟುಂಬಗಳ ಅಗತ್ಯಗಳನ್ನು ನಿಯಂತ್ರಿಸುವ ಶಕ್ತಿಯಾಗಿ ಸಮಾಜ ಸ್ಥಾನ ಪಡೆದಿದೆ. ಹೀಗೆ ವ್ಯಕ್ತಿಯು ರೂಢಿ, ನಿರ್ಮಿಸಿ ಬೆಲೆ ಎನಿಸಿಕೊಂಡಿರುವ ಸಾಮಾಜಿಕ ಬಾಂಧವ್ಯಗಳ ರೂಪಗಳು, ವೈವಿಧ್ಯಗಳು ರೂಢಿ, ಪರಂಪರೆ ಹಾಗೂ ಆಚಾರ-ವಿಚಾರಗಳ ನಡುವಣ ಸಂಬಂಧವನ್ನು ಸಮಾಜ ಹೊಂದಿದೆ. ಪ್ರಾಚೀನ ಕರ್ನಾಟಕದಲ್ಲಿ ಸಾಮಾಜಿಕ ಪ್ರಜ್ಞೆಯು ಹೆಚ್ಚುತ್ತಿದೆ. ಎಂಬುದನ್ನು ವ್ಯಕ್ತಿಯು ತನ್ನಷ್ಟಕ್ಕೆ ತಾನು ತಾಳದೆ ಇತರರಿಗಾಗಿಯೂ ಬಾಳಬೇಕೆಂಬ ಅರಿವು ಅವನಿಗೆ ಸಂಪೂರ್ಣವಾಗಿ ಇದ್ದಿತೆಂಬುದನ್ನು ತೋರಿಸುವುದೇ ಆಗಿದೆ.[5] ಈ ಆದರ್ಶವು ಪ್ರಾಚೀನ ಕಾಲದಿಂದಲೂ ಮುಂದುವರೆದುಕೊಂಡು ಬಂದಿದೆ. ಭೌತಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿ ರೂಪಗೊಳ್ಳುವ ಮನುಕುಲದ ಸಾಂಸ್ಕೃತಿಕ ವಿಕಾಸಕ್ಕೆ ಅಗತ್ಯವಾದ ಬುನಾದಿಯನ್ನು ಕಲ್ಪಿಸುತ್ತದೆ. ಈ ರೀತಿಯಾಗಿ ಹಿಂದಿನ ಜನಜೀವನದ ಬಗ್ಗೆ ಬೆಳಕನ್ನು ಬೀರಬಲ್ಲ. ಆಧಾರಗಳೆಂದರೆ ಶಾಸನಗಳಾಗಿವೆ. ಈ ಹಿನ್ನಲೆಯಲ್ಲಿ ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟಂತೆ ಹೆಗ್ಗಡದೇವನಕೋಟೆ ತಾಲೂಕಿನ ಶಾಸನಗಳನ್ನಾಧರಿಸಿ ಈ ಪರಿಸರದ ಪ್ರಾಚೀನ ಸಮಾಜವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಕ್ರಿ.ಶ.9ನೇ ಶತಮಾನದ ಹೆಬ್ಬಲಗುಪ್ಪೆಯ ಶಾಸನ, ಶ್ರೀ ಪುರುಷನ ಆಳ್ವಿಕೆಗೆ ಸೇರಿದ್ದು ಈ ಶಾಸನದಲ್ಲಿ ದುಗ್ಗಮಾರ ಬಸದಿಯನ್ನು ನಿರ್ಮಿಸಿದ್ದು ಜೊತೆಗೆ ದುಗ್ಗಮಾರ ಬಸದಿಗೆ ನರಸೀಗೆರೆ ಅಪ್ಪೊರು

ಆರು ಖಂಡುಗ ಗದ್ದೆಯನ್ನು ದಾನಬಿಟ್ಟ ವಿಷಯವನ್ನು ದಾಖಲಿಸಲಾಗಿದ್ದು, ಶಾಸನೋಕ್ತ ದುಗ್ಗಮಾರ ಶ್ರೀಪುರುಷನ ಮಗನಾಗಿದ್ದು, ತಂದೆಯ ಕಣ್ಣೆದುರೇ ಮರಣವನ್ನಪ್ಪಿದನು. ಎಂಬ ವಿಷಯವನ್ನು ತಿಳಿಸುತ್ತದೆ.[6] ಸರಗೂರು ಶ್ರೀ ಪುರುಷನ ತಾಮ್ರಶಾಸನದಲ್ಲಿ ಆತನನ್ನು ಪೃಥ್ವಿಕೊಂಗಣಿ ಮಹಾರಾಜನೆಂದು ವರ್ಣಿಸಲಾಗಿದೆ. ಶೀ ಪುರುಷ ಮಹಾರಾಜನು ಕೆಸುವೊಳದ ಒಡೆಯನಾದ ಬಿಣಾಮ್ಮನಿಗೆ ತನ್ನ ಜನ್ಮ ನಕ್ಷತ್ರದ ದಿನದಂದು ಒಂದು ತಿಂಗಳವರೆಗೆ 12 ಜನ ಬ್ರಾಹ್ಮಣರಿಗೆ ಒಪ್ಪೊತ್ತಿನ ಭೊಜನಕ್ಕಾಗಿ ದಣ್ಣಗವಾಡಿ ಎಂಬ ಗ್ರಾಮವನ್ನು ಬ್ರಹ್ಮದೇಯನಾಗಿ ಕೊಟ್ಟನೆಂಬ ಸ್ವಾರಸ್ಯಕರವಾದ ಸಂಗತಿಯು ಈ ಶಾಸನದಿಂದ ತಿಳಿದು ಬರುತ್ತದೆ. ಶಾಸನದ ಉತ್ತರ ಭಾಗವು ಅರಿದಾಳ್ಕೆ –70 ನ್ನು ಆಳುತ್ತಿದ್ದ ಮಹಾಸಾಮಾಂತನಾದ ಮುದುಕೊಙ್ಗಣಿಯ ಅರಸನ ಹೆಸರನ್ನು ಉಲ್ಲೇಖಿಸಿ ಆತನು ರಾಜನ ಅನುಮತಿಯಿಂದ ಪೆರ್ವಟ್ಟಿಯೂರ್ ಮತ್ತು ಮರ್ದೂರ್ ಎಂಬ ಗ್ರಾಮಗಳನ್ನು ದತ್ತಿಕೊಟ್ಟ ವಿಷಯವನ್ನು ಪ್ರಸ್ತಾಪಿಸಿದೆ.[7]

ಕ್ರಿ.ಶ.9ನೇ ಶತಮಾನದ ಕಟ್ಟೆಮನುಗನಹಳ್ಳಿ ಶಾಸನವು ಗಂಗರ ಆಳ್ವಿಕೆ ಕಾಲಕ್ಕೆ ಸೇರಿದ್ದು ರಾಜನಾದ ನೀತಿಮಾರ್ಗ ಪೆರ್ಮಾಡಿಯ ಆಳ್ವಿಕೆಯಲ್ಲಿ ನುಗು ಮತ್ತು ನವಿಲೆನಾಡುಗಳನ್ನು ಎರೆಯಪ್ಪ ಎಂಬ ಅರಸನು ಆಳುತ್ತಿದ್ದಾಗ ಬಯಲುನಾಡಿನ ಶತ್ರುಪಡೆಯು ಕೊತ್ತಮಂಗಲಕ್ಕೆ ನುಗ್ಗಿ ಗೋವುಗಳನ್ನು ಅಪಹರಿಸುವ ಸಂದರ್ಭದಲ್ಲಿ ಪೆರ್ಮಾಡಿಯ ಕೊಂಗಣಿ ಎಂಬ ಗೌಡನು ಅವರನ್ನು ಹಿಮ್ಮೆಟ್ಟಿಸಿ ಹೋರಾಡಿ ಆ ಗೋವುಗಳನ್ನು ಸಂರಕ್ಷಿಸಿಸುವ ಸಂದರ್ಭದಲ್ಲಿ ಮೃತನಾದನು. ಪೆರ್ಮಾಡಿ ಗೌಡನ ಮಗನಾದ ರಾಮನ ಸಲುವಾಗಿ ಪೆರ್ಮಾಡಿ ಗೌಡನಿಗೆ ನಾಡಗೌಡಿಕೆಯನ್ನು ನೀಡಿ ಕಿರುವೂಸೂರನ್ನು ಕಲ್ನಾಡಾಗಿ ಕೊಟ್ಟರು ಎಂಬ ವಿಷಯವನ್ನು ತಿಳಿಸುತ್ತದೆ.[8] ಕ್ರಿ.ಶ.1087–88ರ ಹಳೆಯೂರಿನ ಶಾಸನವು ತಿಳಿಸುವಂತೆ ಪೊಪುನಾಡು ಮತ್ತು ಕಿಲ್ಕ ನಾಡನ್ನು ಆಳುತ್ತಿದ್ದ ಕೊಂಡತ್ತೂರಿನ ಮಲೆಯಮ್ಮ ಎಂಬುವಳು ನಂಜುಂಡೇಶ್ವರ ದೇವರ ಪೂಜಾ ಕೈಂಕರ್ಯಕ್ಕೆ ಭೂಮಿಯನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.[9] ಕ್ರಿ.ಶ.1218 ರ ಕಳ್ಳಂಬಾಳು ಶಾಸನವು 2ನೇ ವೀರಬಲ್ಲಾಳನ ಆಳ್ವಿಕೆ ಕಾಲದಲ್ಲಿ ಹೊರಟಿದ್ದು ನಂತರ 2ನೇ ಬಲ್ಲಾಳನ ಬಿರುದುಗಳಿವೆ. ಆತನ ಆಳ್ವಿಕೆ ಕಾಲದಲ್ಲಿ ಮಹಾಪ್ರಧಾನರಾದ ಕುಮಾರದಂಡನಾಯಕರು ಕೇಶವ ದಂಡನಾಯಕರು ಕುಮಾರನಾಡನ್ನು ಆಳ್ವಿಕೆ ಮಾಡು ಕಾಲದಲ್ಲಿ ನುಗು ನಾಡಿನ ಕಳ್ಳಂಬಾಳು ನಗರದ ನುಗುವಿನ ಉತ್ತರ ತೀರದಲ್ಲಿರುವ ಯಜ್ಞ ಕಾಮೇಶ್ವರ ದೇವರ ಅಂಗ, ರಂಗ, ಭೋಗಕ್ಕೆ ನುಗುನಾಡಿನ ಒಳಗಿನ ಕುಂದೂರು ಗ್ರಾಮವನ್ನು ಮಾಧವ ದಂಡನಾಯಕನು 14 ನಾಡ ಸಮಸ್ತ ಗಾವುಂಡರುಗಳ ಸಹ ಭಾಗಿತ್ವದಲ್ಲಿ ದಾನ ನೀಡಿರುವ ವಿಷಯವನ್ನು ತಿಳಿಸುತ್ತದೆ.[10] ಕ್ರಿ.ಶ.1322ರ ಕ್ಯಾತನಹಳ್ಳಿಯ ಶಾಸನವು ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಹೊರಟಿದ್ದು ಕ್ಯಾತನಹಳ್ಳಿಯ ಲಕ್ಷ್ಮೀ ಕಾಂತದೇವಾಲಯ ಮತ್ತು ಮಲ್ಲಿನಾಥ ದೇವಾಲಯಗಳ ಕ್ರಿ.ಶ.1322 ರಲ್ಲಿ ಪುನ್ರರದ ಪ್ರತಿಷ್ಟೆ ಮಾಡಿಸಿದ ನಿರ್ಮಾಣದ ಕಾಲವನ್ನು

ವಿಷಯದ ಬಗ್ಗೆ ತಿಳಿಸುತ್ತದೆ. ಅಂದರೆ ತಗಡೂರ ಕೊರದ ಕೇತಗಾವುಂಡ 1 ಆರಿದ ಹೊಳಕೆಯ ಕೇತನಹಳ್ಳಿಯನ್ನು ಮಾಡಿ ಮಲ್ಲಿನಾಥ ದೇವಾಲಯದ ಸಹಿತ ಒಂದು ಕೆರೆಯನ್ನು ಕಟ್ಟಿಸಿದ ನಂತರ ಆತನ ಮಗ ಹೊಯ್ಸಳ ಗೌಡನು ಲಕ್ಷ್ಮೀನಾರಾಯಣ ದೇವರ ಸಹಿತಲೂ ಒಂದು ಮಂಟಪವನ್ನು ಮಾಡಿಸಿದನು ನಂತರ ಇದು ಹೆಚ್ಚು ಪ್ರಸಿದ್ಧಿ ಪಡೆಯದ ಕಾರಣ ಇದರ ಚೋಳ ದೇವನ ಮಗ ಅಂಕಪ್ಪ ಮಾಚೀದೇವನ ಮಗ ಚೊಕ್ಕಣ್ಣ ದಿಯಾಗೌಂಡನ ಮಗ ಅಂಕಪ್ಪ ಹೊಯ್ಸಳಗೌಂಡನ ಮಗ ದೇವನನ್ನು ಇವರುಗಳೆಲ್ಲಾ ಕೂಡಿ ಮತ್ತೆ ದೇವಾಲಯ ಪ್ರತಿಷ್ಟೆ ಮಾಡಿಸಿ ಗದ್ದೆ ಬೆದ್ದಲುನ್ನು ಈ ದೇವಾಲಯಗಳ ದಾನ ಬಿಟ್ಟ ವಿಚಾರವನ್ನು ಈ ಶಾಸನ ತಿಳಿಸುತ್ತದೆ.[11] ಹೀಗೆ ಸಾಮಾಜಿಕವಾಗಿ ಜಾತಿ ಆಧಾರಿತ, ವರ್ಣ ಆಧಾರಿತ ಮತ್ತು ವೃತ್ತಿಯಾಧಾರಿತವಾಗಿ ವಿಂಗಡಣೆಯಾಗಿದ್ದು ಸಮಾಜದ ಉನ್ನತಿ ಮತ್ತು ಸಾಮಾಜಿಕ ಸ್ಥಾನಮಾನ ಇವುಗಳನ್ನು ಕುರಿತಂತೆ ವಿವರಿಸಲಾಗಿದೆ.

**ಅಡಿಟಿಪ್ಪಣಿಗಳು**

1. ಚಾ.ನ.ಶಂಕರ್.(ಭೈರಪಕೆ.-ಸಮಗ್ರ ಭಾರತೀಯ ಸಮಾಜ.2008.ಪುಟ-35-36
2. ಅದೇ-ಪುಟ-35-36
3. ತಿಪ್ಪರುದ್ರೇಸ್ವಾಮಿ.ಹೆಚ್.-ಕರ್ನಾಟಕ ಸಂಸ್ಕೃತಿ ಸಮೀಕ್ಷೆ-1985.ಪುಟ-94-95
4. ಅದೇ-ಪುಟ-35-36
5. ಚಿದಾನಂದಮೂರ್ತಿ.ಎಂ.,2002, ಪೂರ್ವೋಕ್ತ, ಪುಟ-454
6. ಎ.ಕ.ಸಂ-3.ಶಾ.ಸಂ-63. ಪುಟ ಸಂ-468
7. ಎ.ಕ.ಸಂ-3,ಶಾ.ಸಂ-90, ಪುಟ ಸಂ-497.
8. ಎ.ಕ.ಸಂ-3.ಶಾ.ಸಂ-5. ಪುಟ ಸಂ-433-34
9. ಎ.ಕ.ಸಂ-3.ಶಾ.ಸಂ-114. ಪುಟ ಸಂ-509
10. ಎ.ಕ.ಸಂ-3.ಶಾ.ಸಂ-81. ಪುಟ ಸಂ-476
11. ಎ.ಕ.ಸಂ-3.ಶಾ.ಸಂ-14. ಪುಟ ಸಂ-439-440